# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

***SC.No.146/2022***

PW.1
CW.1

ದಿನಾಂಕಃ 11-08-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ದೂರು ಕೊಟ್ಟ ನಂತರ ಪೊಲೀಸರು ಕಮಲಾನಾಯ್ಕನ ತಾಂಡ್ಯಕ್ಕೆ ಬಂದಿದ್ದರು. ಸಾಕ್ಷಿ ಮಹಜರ್ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರನ್ನು ನಿಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಪೊಲೀಸರು ಮತ್ತು ನಾನು ಮಹಜರ್ ವೇಳೆ ಹಾಜರಿದ್ದೆವು. ರವಿಚಂದ್ರನಾಯ್ಕನ ಮನೆಯಲ್ಲಿ ಕೊಲೆ ನಡೆದಿತ್ತು. ಸದರಿ ಮನೆ ನನ್ನ ಅಜ್ಜಿ ಮಂಗಲೀಬಾಯಿ ರವರ ಹೆಸರಿನಲ್ಲಿ ಇದೆ.

ಶವ ಹೂತುಹಾಕಿದ 2 ತಿಂಗಳ ನಂತರ ಶವ ಹೊರತೆಗೆಯಲು ಪೋಲೀಸರು ಬಂದಿದ್ದರು, ಶವ ತೆಗೆಯುವ ವೇಳೆ, ಪೊಲೀಸರು, ತಹಶೀಲ್ದಾರರು, ವೈದ್ಯರು, ನಾನು ಮತ್ತು ನಮ್ಮ ಊರಿನ ಗ್ರಾಮಸ್ಥರು ಸ್ಥಳದಲ್ಲಿ ಇದ್ದರು. ರಾಜನಾಯ್ಕನ ಮನೆಯ ಕಟ್ಟಡ ನಿರ್ಮಾಣ ಮಾಡುತ್ತಿದ್ದ ಪಾಯದಲ್ಲಿ ಶವ ಇತ್ತು. ರಾಜನಾಯ್ಕ ಮತ್ತು ಶಾವಂತ್ರಿಬಾಯಿ ಶವ ಹೂತು ಹಾಕಿದ್ದ ಸ್ಥಳವನ್ನು ತೋರಿಸಿದರು. ಪೊಲೀಸರು ಜೆಸಿಬಿ ಸಹಾಯದಿಂದ ಶವವನ್ನು ಹೊರತೆಗೆದರು. ಶವಹೊರತೆಗೆದ ಸ್ಥಳದಲ್ಲಿ ಶವಕೊಳೆತಿದ್ದು ಶವದ ಮೂಳೆಗಳು ಮತ್ತು

ಶವಸುತ್ತಿದ್ದ ಬಟ್ಟೆ ಸ್ಥಳದಲ್ಲಿ ಬಟ್ಟೆ ಇತ್ತು. ಮೃತದೇಹದ ಮೇಲೆ ಮಾಂಸಖಂಡಗಳು ಇರಲಿಲ್ಲ ಮೂಳೆಗಳು ಮಾತ್ರ ಇತ್ತು. ಶವಸುತ್ತಿದ್ದ ಬಟ್ಟೆರಗ್ಗಿನ ಬಟ್ಟೆಯಾಗಿತ್ತು. ವೈದ್ಯರು ಶವ ಹೊರತೆಗೆದ ನಂತರ ಪರೀಕ್ಷೆ ಮಾಡಿದರು. ಶವ ಸುತ್ತಿದ್ದ ಬಟ್ಟೆ ಕೊಳೆತಿತ್ತು. ಕೊಲೆ ಮಾಡಿದ್ದ ಮನೆ ಮತ್ತು ಶವ ಹೂತು ಹಾಕಿದ್ದ ಮನೆಗಳು ಎರಡೂ ಹತ್ತಿರದಲ್ಲೇ ಇರುತ್ತವೆ.

ನಾನು ರಾಜಾನಾಯ್ಕ ಮತ್ತು ಸಾವಂತ್ರಿ ಬಾಯಿಯನ್ನು ನೋಡಿದರೆ ಗುರುತಿಸಬಲ್ಲೆ. ಈ ಘಟನೆಗೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ವಿಸಿ ಮೂಲಕ ಹಾಜರುಪಡಿಸಿರುವ 1 ಮತ್ತು 2 ನೇ ಅರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ರಾಜಾನಾಯ್ಕ ಮತ್ತು ರವಿಚಂದ್ರನಾಯ್ಕ ಅಣ್ಣ ತಮ್ಮಂದಿರು. ಆರೋಪಿ ರಾಜಾನಾಯ್ಕ ಅಣ್ಣ. ಮೃತ ರವಿಚಂದ್ರನಾಯ್ಕ ರಾಜಾನಾಯ್ಕನ ತಮ್ಮ.

**ಪಾಟೀ ಸವಾಲುಃ ಆರೋಪಿಗಳ ಪರಃ ಸಿಡಿಸಿ ರವರಿಂದ**

ನಾನು ಎಸ್.ಎಸ್.ಎಲ್.ಸಿ ಉತ್ತೀರ್ಣನಾಗಿದ್ದೇನೆ. ಸುಮಾರು 40 ವರ್ಷಗಳಿಂದಲೂ ನನ್ನ ತಾತನ ಎಲ್ಲಾ ಮಕ್ಕಳು ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆ. ನನ್ನ ತಾತ ಮತ್ತು ಅಜ್ಜಿಗೆ ಒಟ್ಟು 25 ಎಕರೆ ಜಮೀನು ಇತ್ತು. ಎಲ್ಲಾ ಆಸ್ತಿಗಳನ್ನು ಎಲ್ಲಾ ಮಕ್ಕಳು ಸುಮಾರು 25-30 ವರ್ಷದ ಹಿಂದೆಯೇ ವಿಭಾಗ ಮಾಡಿಕೊಂಡಿರುತ್ತಾರೆ. 1 ನೇ ಅರೋಪಿಗೆ ಮತ್ತು ಮೃತ ರವಿಚಂದ್ರನಾಯ್ಕನಿಗೆ ವಿಭಾಗದಲ್ಲಿ ಸುಮಾರು 6 ಎಕರೆ ಜಮೀನು ಬಂದಿರುತ್ತದೆ. ನನಗೂ ಸಹ 6 ಎಕರೆ ಜಮೀನು ಬಂದಿರುತ್ತದೆ. ಕಮಲಾನಾಯ್ಕನ ತಾಂಡಾದಲ್ಲಿ ಸುಮಾರು 80-90 ಮನೆಗಳು ಇರುತ್ತವೆ. ನನ್ನ ಸಂಬಂಧಿಕರು ಹೆಚ್ಚು ಮನೆಗಳು ಇವೆ ನಮ್ಮ ಜನಾಂಗದ ಬೇರೆ

ಜನಗಳೂ ಸಹ ವಾಸವಾಗಿರುತ್ತಾರೆ. ಮನೆಗಳು ತಾಂಡಾದಲ್ಲಿ ಹತ್ತಿರದಲ್ಲೇ ಇರುತ್ತವೆ. ನಮ್ಮ ಮನೆಯ ಪಕ್ಕದಲ್ಲಿ ನಮ್ಮ ಸಂಬಂದಿ ರಾಜಾನಾಯ್ಕನ ಮನೆ ಇರುತ್ತದೆ. ಮತ್ತೊಂದು ಪಕ್ಕದಲ್ಲಿ ಲಕ್ಷ್ಮೀಬಾಯಿ ರವರ ಮನೆಯಲ್ಲಿ ಇರುತ್ತವೆ. ನನ್ನ ತಾತನ ನಾಲ್ವರು ಮಕ್ಕಳು ಅಕ್ಕ ಪಕ್ಕದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ. ಮೃತ ರವಿಚಂದ್ರನಾಯ್ಕ ಮತ್ತು 1 ನೇ ಅರೋಪಿ ರಾಜಾನಯ್ಕನ ಮನೆ 10-15 ಅಡಿಗಳ ಅಂತರದಲ್ಲಿ ಇದೆ. ರಾಜಾನಾಯ್ಕ ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದ. ಆತ ಮನೆ ಕಟ್ಟಲು ತೆಗೆದಿದ್ದ ಪಾಯದ ಮೇಲೆ ಗುಡಿಸಲು ಹಾಕಿದ್ದ. ನನ್ನ ಮನೆ ಮತ್ತು 1 ನೇ ಅರೋಪಿ ಮನೆಯ ಮಧ್ಯದಲ್ಲಿ ಒಂದು ಮನೆ ಮಾತ್ರ ಇರುತ್ತದೆ. ರವಿಚಂದ್ರ ನಾಯ್ಕನ ಮನೆ ನನ್ನ ಮನೆ ಬೇರೆ ಲೈನ್ ನಲ್ಲಿ ಇರುತ್ತದೆ. ಸುಮಾರು ನಮ್ಮಿಬ್ಬರ ಮನೆ 20 ಅಡಿಗಳ ಅಂತರದಲ್ಲಿ ಇದೆ.

ಯುಗಾದಿ ಹಬ್ಬದ ಸಮಯದಲ್ಲಿ ಬೇಸಿಗೆ ಕಾಲ ಇರುತ್ತದೆ. ಆ ಸಮಯದಲ್ಲಿ ಸೆಕೆ ಜಾಸ್ತಿ ಇರುತ್ತದೆ. ತಾಂಡ್ಯಾದಲ್ಲಿ ಬೇಸಿಗೆ ಕಾಲ ಇದ್ದ ಕಾರಣ ಕೆಲವರು ಮನೆಯ ಹೊರಗೆ ಮಲಗುತ್ತಾರೆ ಎಂದರೆ ಗೊತ್ತಿಲ್ಲ. ತಾಂಡ್ಯಾದಲ್ಲಿ ಸಾಮಾನ್ಯವಾಗಿ ಬೇಸಿಗೆ ಸಮಯದಲ್ಲಿ ಎಲ್ಲರೂ ಮನೆಯಿಂದ ಹೊರಗೆ ಮಲಗುತ್ತಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ತಾಂಡ್ಯಾದಲ್ಲಿ ಮನೆಯಲ್ಲಿ ಮಾತನಾಡಿದರೆ ಅಕ್ಕ ಪಕ್ಕದ ಮನೆಗಳಿಗೆ ಕೇಳಿಸುತ್ತದೆ ಎಂದರೆ ಸರಿಯಲ್ಲ. ಕೂಗಿಕೊಂಡು ಮಾತನಾಡಿದರೆ ಮಾತ್ರ ಕೇಳಿಸುತ್ತದೆ. ರಾಜಾನಾಯ್ಕನಿಗೆ ಇಬ್ಬರು ಹೆಣ್ಣು ಮಕ್ಕಳು ಒಬ್ಬರಿಗೆ ಮದುವೆ ಅಗಿರುತ್ತದೆ. ಈ ಪ್ರಕರಣದ ಘಟನೆ ನಡೆಯುವ ವೇಳೆ ಒಬ್ಬ ಮಗಳಿಗೆ ವಿವಾಹವಾಗಿತ್ತು. ಮತ್ತೊಬ್ಬ ಮಗಳಿಗೆ ವಿವಾಹವಾಗಿರಲಿಲ್ಲ. ಅಕೆ ಪ್ರಾಪ್ತ ವಯಸ್ಕಳಾಗಿದ್ದಳು. ಅವಿವಾಹಿತಳಾಗಿದ್ದ ಮಗಳು ರಾಜಾನಾಯ್ಕನೊಂದಿಗೆ ವಾಸವಾಗಿದ್ದಳು.

ರಾಜಾನಾಯ್ಕುನಿಗೂ ಮೃತ ರವಿಚಂದ್ರನಾಯ್ಕುನಿಗೂ ಮತ್ತು ನನಗೂ ಆಸ್ತಿ ವಿಚಾರಕ್ಕೆ ಮನಸ್ತಾಪ ಇತ್ತು ಎಂದರೆ ಸರಿಯಲ್ಲ. ಮನಸ್ತಾಪ ಇದ್ದ ಕಾರಣವೇ ರಾಜನಾಯ್ಕು ಮತ್ತು ರವಿಚಂದ್ರನಾಯ್ಕುನಿಂದ ದಾಖಲಾತಿಗೆ ಸಹಿ ಮಾಡಿಸಿಕೊಳ್ಳಲು ಓಡಾಡುತ್ತಿದ್ದೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ಬೆಂಗಳೂರಿನಲ್ಲಿ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದ. ಆತ ಹಬ್ಬಗಳಿಗೆ ತಾಂಡ್ಯಾಕ್ಕೆ ಬಂದು ನಂತರ ಕೆಲಸಕ್ಕೆ ವಾಪಸ್ಸು ಹೋಗುತ್ತಿದ್ದರು. ಮೃತ ವ್ಯಕ್ತಿಯ ಹಿರಿಯ ಮಗ ಈಗ 9 ನೇ ತರಗತಿ. 2 ನೇ ಮಗ ಈಗ 7 ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನಗೆ ಮೃತ ವ್ಯಕ್ತಿಯ ಪೋನ್ ನಂಬರ್ ಗೊತ್ತಿಲ್ಲ. ನಾನು ಮೃತ ರವಿಚಂದ್ರನಾಯ್ಕುನ ಬಗ್ಗೆ ಆತನ ಪತ್ನಿ ಸಾವಂತ್ರಿ ಬಾಯಿಗೆ ಆಗಾಗ್ಗೆ ವಿಚಾರಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 1-6-2022 ರಂದು ಸಂಜೆ 6 ಗಂಟೆ ಸಮಯಕ್ಕೆ ನಾನು, ನಮ್ಮ ಗ್ರಾಮದ ಕಮಲಾನಾಯ್ಕು, ಲಾಲ್ಯಾನಾಯ್ಕು, ಬಾಮ್ಲಾನಾಯ್ಕು, ಚಂದಾನಾಯ್ಕು, ಲಕ್ಷ್ಮಾನಾಯ್ಕು, ರಾಜಾನಾಯ್ಕುನ ಮನೆಗೆ ಹೋಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಅರೋಪಿ 2 ನೇ ಅರೋಪಿ ಮನೆಯಲ್ಲಿ ಇಬ್ಬರೂ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಬ್ಬರೂ ರವಿಚಂದ್ರನಾಯ್ಕು ಎಲ್ಲಿ ಇದ್ದಾನೆ ಗೊತ್ತಿಲ್ಲ ಎಂದು ನಮಗೆ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರೋಪಿಗಳಿಬ್ಬರೂ ಗ್ರಾಮಸ್ಥರು ಬೆದರಿಸಿ ಕೇಳಿದಾಗ ಯುಗಾದಿ ಹಬ್ಬದ ದಿನ ರಾತ್ರಿ 10 ಗಂಟೆಗೆ ರಾಜಾನಾಯ್ಕು ರವಿಚಂದ್ರನಾಯ್ಕುನ ಕೆನ್ನೆಗೆ ಹೊಡೆದಾಗ ಆತ ಕೆಳಗೆ ಬಿದ್ದಾಗ

ರಾಜಾನಯ್ಕ ಅತನ ಕುತ್ತಿಗೆ ಮೇಲೆ ಕಾಲಿಟ್ಟು ಸಾಯಿಸಿದ್ದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಾಯದ ಬಳಿ ಹೋಗಿ ಶವ ನೋಡಿದೆ. ಆರೋಪಿಗಳಿಬ್ಬರೂ ರವಿಚಂದ್ರನಾಯ್ಕನ ಮೃತ ದೇಹವನ್ನು ತಮ್ಮ ಮನೆಯ ಮುಂದೆ ಇರುವ ಕಟ್ಟಡ ನಿರ್ಮಾಣ ಮಾಡಲು ಹಾಕಿದ್ದ ಪಾಯದಲ್ಲಿ ಹಾಕಿ ಹೂತುಹಾಕಿದ್ದಾಗಿ ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4-5 ಜನ 2 ನೇ ಅರೋಪಿ ಮನೆಗೆ ಹೋಗಿ ರವಿಚಂದ್ರನಾಯ್ಕನ ಬಗ್ಗೆ ವಿಚಾರಿಸಿದೆವು. ನಾವು 2 ನೇ ಅರೋಪಿ ಮನೆಗೆ ಹೋಗಿ ವಿಚಾರಿಸಿಲ್ಲ ಎಂದರೆ ಸರಿಯಲ್ಲ.

1 ಮತ್ತು 2 ನೇ ಅರೋಪಿಗಳ ಮಧ್ಯೆ ಅನೈತಿಕ ಸಂಬಂದ ಇದ್ದ ಬಗ್ಗೆ ನನಗೆ ಗೊತ್ತು. 1 ನೇ ಅರೋಪಿ ತನ್ನ ಪತ್ನಿ ಮರಣ ಹೊಂದಿದ ನಂತರ 2 ನೇ ಅರೋಪಿಯೊಂದಿಗೆ ಅನೈತಿ ಸಂಬಂದ ಹೊಂದಿದ್ದರು. ನಾವು ಇಬ್ಬರೂ ಅರೋಪಿಗಳಿಗೆ ಈ ಬಗ್ಗೆ ಕೇಳಿರಲಿಲ್ಲ. ಆರೋಪಿಗಳಿಬ್ಬರಿಗೂ ಅನೈತಿಕ ಸಂಬಂದ ಇರಲಿಲ್ಲ ನಾನು ಅನೈತಿಕ ಸಂಬಂದ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅನೈತಿಕ ಸಂಬಂದದ ಕಾರಣ ಅರೋಪಿಗಳಿಬ್ಬರೂ ರವಿಚಂದ್ರನಾಯ್ಕನನ್ನು ಕೊಲೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1 ನೇ ಆರೋಪಿ ತನ್ನ ಪತ್ನಿಯ ಕೊಲೆ ಪ್ರಕರಣದಲ್ಲಿ ಬಿಡುಗಡೆಯಾಗಿದ್ದನು. ಆರೋಪಿಗಳಿಬ್ಬರೂ ರವಿಚಂದ್ರನಾಯ್ಕನನ್ನು ಕೊಲೆ ಮಾಡಿದ್ದೇವೆ ಎಂದು ತಿಳಿಸಿದ ನಂತರ ನಾನು ದೂರು ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತದ್ದೇನೆ ಎಂದರೆ ಸರಿಯಲ್ಲ. 1 ನೇ ಅರೋಪಿ

ತನ್ನ ಪತ್ನಿಯ ಕೊಲೆ ಪ್ರಕರಣದಲ್ಲಿ ಜೈಲಿಗೆ ಹೋಗಿದ್ದ ಕಾರಣ ಅದನ್ನು ದುರುಪಯೋಗಪಡಿಸಿಕೊಂಡು 1 ನೇ ಅರೋಪಿಗೂ ಮತ್ತು 2 ನೇ ಅರೋಪಿಗೂ ಅಕ್ರಮ ಸಂಬಂದ ಇತ್ತು ಎಂದು ಸುಳ್ಳು ಕತೆ ಕಟ್ಟಿ 1 ನೇ ಅರೋಪಿಯ ಮತ್ತು ಮೃತನ ಆಸ್ತಿ ಕಬಳಿಸಲು ಸುಳ್ಳು ದೂರು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಈಗಲೂ ಆಸ್ತಿ ನನ್ನ ಅಜ್ಜಿಯ ಹೆಸರಿನಲ್ಲಿ ಇರುತ್ತದೆ.

ನಮ್ಮ ಊರಿನಿಂದ ಬುಕ್ಕಾಪಟ್ಟಣಕ್ಕೆ 9 ಕಿಮೀ ಅಂತರದಲ್ಲಿದೆ. ಶಿರಾ 25 ಕಿಮೀ ಅಂತರದಲ್ಲಿದೆ. ಬುಕ್ಕಾಪಟ್ಟಣದಲ್ಲಿ ಪೊಲೀಸ್ ಠಾಣೆ ಇರುತ್ತದೆ. ನಾನು ಸುಳ್ಳು ದೂರು ನೀಡಿ ಪ್ರಕರಣಕ್ಕೆ ಅನುಕೂಲವಾಗುವಂತೆ ಪೊಲೀಸರು ಠಾಣೆಯಲ್ಲಿ ತಯಾರಿಸಿದ ಮಹಜರ್ ಗೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ನಾನು ದೂರು ಕೊಟ್ಟ ಮಾರನೇ ದಿನ ಪೊಲೀಸರು, ವೈದ್ಯರು ಶವ ತೆಗೆಯಲು ಬಂದಿದ್ದರು. ನಾನು ಪೊಲೀಸರಿಗೆ ಶವ ಹೂತಿದ್ದ ಸ್ಥಳ ತೋರಿಸಿದ್ದೆ ಎಂದರೆ ಸರಿಯಲ್ಲ. ಆರೋಪಿಗಳು ಪೊಲೀಸರಿಗೆ ಶವ ಹೂತಿದ್ದ ಸ್ಥಳ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ಅರೋಪಿಗಳ ವಿರುದ್ಧ ಸುಳ್ಳು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

3 ನೇಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.